# ನಿಕೊಲಸ್ ಪೂರನ್
# ಮರಿ ಕ್ರಿಸ್ ಗೇಲ್

ಇಪ್ಪತ್ತೈದರ ಹುಡುಗನೊಬ್ಬನ ಬದುಕು ಇಷ್ಟು ಸಿನಿಮೀಯ ಆಗಿರಬಹುದೇ ಎಂದು ಹುಬ್ಬೇರುವಂತೆ ನಿಕೊಲಸ್ ಪೂರನ್ ಇದುವರೆಗೆ ಜೀವಿಸಿದ್ದಾರೆ. ನೋವಿನ, ನಿಷೇಧದ, ವೆಸ್ಟ್‌ಇಂಡೀಸ್ ಕ್ರಿಕೆಟ್ ಮಂಡಳಿಯ ಆರ್ಥಿಕ ಬಿಕ್ಕಟ್ಟಿನ ಕಹಿಗಳನ್ನೆಲ್ಲ ನುಂಗಿ ಅವರು ವಿಷಕಂಠ ಆಗಿದ್ದಾರೋ ಏನೋ? ಸದ್ಯಕ್ಕವರು ಐಪಿಎಲ್ ಸೆನ್ಸೇಷನ್!

■ ವಿಶಾಖ ಎನ್.

ಐದು ವರ್ಷದ ಹಿಂದಿನ ಮಾತು. ಕಾರು ಅಪಘಾತಕ್ಕೆ ಈಡಾಗಿ ವೆಸ್ಟ್‌ಇಂಡೀಸ್ ಕ್ರಿಕೆಟಿಗ ನಿಕೊಲಸ್ ಪೂರನ್ ಹೆಬ್ಬೆರಳುಗಳು ಹಾಗೂ ಮೊಣಕಾಲಿನ ಭಾಗಗಳು ಆಡಿಸಲಾಗದ ಸ್ಥಿತಿ ತಲುಪಿದ್ದವು. ಕೆಲಹೊತ್ತು ಪ್ರಜ್ಞೆಯನ್ನೂ ಕಳೆದುಕೊಳ್ಳುವಷ್ಟು ಪೆಟ್ಟು ಬಿದ್ದಿತ್ತು. ವೈದ್ಯರು ಮತ್ತೆ ಕ್ರಿಕೆಟ್ ಆಡಲು ಆಗುವುದೋ ಇಲ್ಲವೋ ಎಂದು ಅನುಮಾನ ವ್ಯಕ್ತಪಡಿಸಿದ್ದರು. ಆ ಹಂತದಲ್ಲಿ ಎರಡು ಶಸ್ತ್ರಚಿಕಿತ್ಸೆಗಳ ನಂತರ ಪೂರನ್ ಚೇತರಿಸಿಕೊಂಡಿದ್ದೇ ಸ್ಫೂರ್ತಿಯ ಕಥನ.

'ಕಿಂಗ್ಸ್ ಇಲೆವೆನ್ ಪಂಜಾಬ್' ತಂಡದ ಪರವಾಗಿ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ (ಐಪಿಎಲ್) ನಲ್ಲಿ ಪೂರನ್ ಸಿಕ್ಸರ್ ಹೊಡೆಯುವ ಸಾಮರ್ಥ್ಯದಿಂದಲೇ ಗುರುತಾಗಿದ್ದಾರೆ. ಗುಡ್ ಲೆಂಗ್ತ್‌ನಿಂದ ಒಂದಿಷ್ಟು ಮುಂದಕ್ಕೆ ಚೆಂಡು ಬಿದ್ದರೂ ಲೀಲಾಜಾಲವಾಗಿ ಸಿಕ್ಸರ್‌ಗೆ ಎತ್ತುವ ನೀಳಕಾಯದ ಈ ಹುಡುಗನ ಕಂಡು ಹಿಂದೊಮ್ಮೆ ಮೈಕ್ ಹೆಸನ್ 'ಯುವ ಕ್ರಿಸ್ ಗೇಲ್' ಎಂದು ಬಣ್ಣಿಸಿದ್ದರು. ಹೆಸನ್ ಪಂಜಾಬ್ ತಂಡದ ಐಪಿಎಲ್ ಕೋಚ್ ಆಗಿದ್ದವರೇ.

ಕಳೆದ ವರ್ಷ ಐಪಿಎಲ್‌ನಲ್ಲಿ 7 ಇನಿಂಗ್ಸ್‌ಗಳಿಂದ 168 ರನ್‌ಗಳನ್ನು ಪೂರನ್ ಕಲೆಹಾಕಿದ್ದರು. ಔಟಾಗದೆ ಗಳಿಸಿದ 48 ಅತಿ ಹೆಚ್ಚು ಎನಿಸಿತ್ತು. ಸ್ಟ್ರೈಕ್ ರೇಟ್ ಸದಾ 145ಕ್ಕಿಂತ ಹೆಚ್ಚು. ಈ ವರ್ಷ ಹತ್ತು ಪಂದ್ಯಗಳಿಂದ 295 ರನ್‌ಗಳು ಪೂರನ್ ಬ್ಯಾಟ್‌ನಿಂದ ಹರಿದಿವೆ. ಇದುವರೆಗೆ ಐಪಿಎಲ್‌ನ 17 ಪಂದ್ಯಗಳಲ್ಲಿ 36 ಸಿಕ್ಸರ್‌ಗಳು, 20 ಬೌಂಡರಿಗಳನ್ನು ವಿಂಡೀಸ್‌ನ ಈ ಪ್ರತಿಭಾವಂತ ಹೊಡೆದಿರುವುದನ್ನು ನೋಡಿದರೆ 'ಮರಿ ಕ್ರಿಸ್ ಗೇಲ್' ಎನ್ನದೇ ಇರಲಾಗದು.

ಪೂರನ್ ಶಾಲಾ ಕ್ರಿಕೆಟ್‌ನಿಂದಲೇ ಗಮನ ಸೆಳೆಯುತ್ತಾ ಬಂದ ಪ್ರತಿಭೆ. 2013ರಲ್ಲಿ ಕೆರಿಬಿಯನ್ ಪ್ರೀಮಿಯರ್ ಲೀಗ್ (ಸಿಪಿಎಲ್)ಗೆ ಆಯ್ಕೆಯಾದಾಗ ಅನೇಕರು ಈ ತುಡುಗು ಹುಡುಗನ ಕಡೆ ಬೆರಗುಗಣ್ಣಿನಿಂದ ನೋಡಿದ್ದರು. ಹದಿನಾರರ ವಯಸ್ಸಿನಲ್ಲಿ ಹೇಗೆ ಆಡಿಯಾನು ಎಂಬ ಕುತೂಹಲ. ಟ್ರಿನಿಡ್ಯಾಡ್ ರೆಡ್ ಸ್ಟೀಲ್ ತಂಡವನ್ನು ಪ್ರತಿನಿಧಿಸಿದ ಪೂರನ್, ಮೊದಲ ಪಂದ್ಯದಲ್ಲೇ 24 ಎಸೆತಗಳಲ್ಲಿ 54 ರನ್‌ಗಳನ್ನು ಕಲೆಹಾಕಿದರು. ಚಾಂಪಿಯನ್ಸ್ ಲೀಗ್‌ನಲ್ಲೂ ಆಯ್ಕೆಗಾರರು ತನ್ನತ್ತ ನೋಡುವಂತೆ ಆಡಿದ್ದು ಕ್ರಿಕೆಟ್ ಪ್ರೀತಿಗೆ ಸಾಕ್ಷಿ.

2014ರಲ್ಲಿ ನಡೆದ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ವೆಸ್ಟ್‌ಇಂಡೀಸ್‌ನ ವಿಕೆಟ್ ಕೀಪರ್ ನಿಕೊಲಸ್ ಪೂರನ್ ಸಹಜವಾಗಿಯೇ ಆಕರ್ಷಣೆಯಾಗಿದ್ದರು. ಆಗ ವಯಸ್ಸು 19 ಕೂಡ ದಾಟದ ಅವರು ಆರು ಪಂದ್ಯಗಳಿಂದ 303 ರನ್‌ಗಳನ್ನು ಸೇರಿಸಿ, ಅತಿ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ನಾಲ್ಕನೆಯವರೆನಿಸಿಕೊಂಡರು.

ಟ್ರಿನಿಡ್ಯಾಡ್ ಹಾಗೂ ಟೊಬ್ಯಾಗೊ ತಂಡವನ್ನು ದೇಸಿ ಕ್ರಿಕೆಟ್‌ನಲ್ಲಿ ಪ್ರತಿನಿಧಿಸಿದ ಪೂರನ್, ಮೆಕ್‌ಬೀನ್‌ನಲ್ಲಿ ಶಾಲಾ ಕ್ರಿಕೆಟ್ ಆಡುವ ಕಾಲದಿಂದಲೂ ಎಡಗೈ ಬ್ಯಾಟ್ಸ್‌ಮನ್ ಆಗಿ ಪದೇ ಪದೇ ಕಣ್ಣು ಕೋರೈಸುತ್ತಾ ಬಂದಿದ್ದಾರೆ. ತನ್ನ ವೃತ್ತಿಬದುಕು ಇನ್ನೇನು ಟೇಕ್‌ಆಫ್ ಆಯಿತು ಎಂದುಕೊಳ್ಳುವಾಗಲೇ ಅಪಘಾತಕ್ಕೆ ಈಡಾಗಿದ್ದು ದೊಡ್ಡ ಹೊಡೆತ. ಆದರೂ ಪೂರನ್ ಧೃತಿಗೆಡಲಿಲ್ಲ. 2016ರಲ್ಲಿ ಮತ್ತೆ ಸಿಪಿಎಲ್‌ನಲ್ಲಿ ಆಡಿದರು. ಎಂಟು ಪಂದ್ಯಗಳಲ್ಲಿ 217 ರನ್‌ಗಳನ್ನು ಕಲೆಹಾಕಿ, ಅದೇ ವರ್ಷ ಪಾಕಿಸ್ತಾನದ ವಿರುದ್ಧ ಆಡಲಿದ್ದ ವೆಸ್ಟ್‌ಇಂಡೀಸ್ ತಂಡಕ್ಕೆ ಆಯ್ಕೆಯಾದರು. ಅಂತರರಾಷ್ಟ್ರೀಯ ಪಂದ್ಯಗಳಿಗೆ ಪರಿಗಣಿಸುವಂಥ ಪ್ರತಿಭೆ ತಾನು ಎನ್ನುವುದನ್ನು ನೋವಿನಿಂದ ಹೊರಬಂದು ಸಾಬೀತುಪಡಿಸಿದ್ದು ಪೂರನ್ ಛಲಕ್ಕೆ ಸಾಕ್ಷಿ.

ಪೂರನ್ ಅವರದ್ದು ತುಡುಗು ಬುದ್ಧಿಯೇ. ದೇಸಿ ಕ್ರಿಕೆಟ್ ಅನ್ನು ಬಿಟ್ಟು ಬಾಂಗ್ಲಾದೇಶದ ಪ್ರೀಮಿಯರ್ ಲೀಗ್ ಆಡಲು ಹೋಗಿದ್ದರು. ಹತ್ತು ತಿಂಗಳು ರಾಷ್ಟ್ರೀಯ ತಂಡದಿಂದ ನಿಷೇಧ ಹೇರಿಸಿಕೊಳ್ಳಲು ಅದೇ ಕಾರಣವಾಯಿತು. ಆದರೆ, ಬಾಂಗ್ಲಾದಲ್ಲಿ ನಡೆದ ಆ ಟೂರ್ನಿಯಲ್ಲೂ ಅವರು ಮನಸೂರೆಗೊಳ್ಳುವಂತೆ ಆಡಿ ಬಂದರು. ಅಪಘಾತದಿಂದ ಚೇತರಿಸಿಕೊಂಡು, ದೇಶಕ್ಕಾಗಿ ಆಡುವ ಅವಕಾಶ ಪಡೆದು, ಮತ್ತೆ ಒಂದು ವರ್ಷ ಅದೇ ದೇಶವನ್ನು ಪ್ರತಿನಿಧಿಸದೇ ಇರುವ ಸಂಕಟ ಅನುಭವಿಸಿದವರಿಗೇ ಗೊತ್ತು. ಕೆನಡಾದಲ್ಲಿ 2018ರಲ್ಲಿ ನಡೆದ ಗ್ಲೋಬಲ್ ಟ್ವೆಂಟಿ20 ಲೀಗ್‌ನಲ್ಲಿ ಆಡುವ ಮೂಲಕ ಮತ್ತೆ ಈ ಹುಡುಗ ತನ್ನ ಸಾಮರ್ಥ್ಯ ಸಾಬೀತುಪಡಿಸಿದ್ದಾಯಿತು.

ಕಳೆದ ತಿಂಗಳು 'ರಾಜಸ್ಥಾನ ರಾಯಲ್ಸ್' ವಿರುದ್ಧ ನಡೆದ ಐಪಿಎಲ್ ಪಂದ್ಯವೊಂದರಲ್ಲಿ ಸಂಜು ಸ್ಯಾಮ್ಸನ್ ಹೊಡೆದ ಚೆಂಡು ಇನ್ನೇನು ಸಿಕ್ಸರ್‌ಗೆ ಹೋಗಬೇಕಿತ್ತು. ಚಿಗರೆಯಂತೆ ಗಾಳಿಯಲ್ಲಿ ತೇಲಿ, ಬೌಂಡರಿ ಗೆರೆ ಮೇಲೇರಿ ಚೆಂಡನ್ನು ತಳ್ಳಿದರು. ಆರು ಆಗುತ್ತಿದ್ದ ರನ್‌ಗಳನ್ನು ನಾಲ್ಕಕ್ಕೇ ನಿಯಂತ್ರಿಸಿದ ಅವರ ಆ ಅಥ್ಲೆಟಿಸಂ ಕಂಡು ಸಚಿನ್ ತೆಂಡೂಲ್ಕರ್ ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಪ್ರತಿಕ್ರಿಯಿಸಿದರು. 'ಇಂತಹ

